ಒ ಎಸ್ 8/2022 ಪಿ.ಡಬ್ಲ್ಯೂ: 1

ಇಂದು ದಿಃ 17.09.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಸಿಂಧುವಳ್ಳಿಯಲ್ಲಿ ವಾಸ ಇದ್ದೇನೆ. ನಾನು ಸಿಂಧುವಳ್ಳಿಯಲ್ಲಿ ವಾಸ ಇರುವ ಬಗ್ಗೆ ಗುರುತಿನ ಚೀಟಿಗಳನ್ನು ಹಾಜರುಪಡಿಸಿದ್ದೇನೆ. ನಾನು ಸಿಂಧುವಳ್ಳಿಯಲ್ಲಿ ವಾಸವಿಲ್ಲದ ಕಾರಣ ವಾಸ ಇರುವ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸಿಂಧುವಳ್ಳಿಯಲ್ಲಿ ವಾಸ ಇದ್ದರೆ ಗುರುತಿನ ಚೀಟಿಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಉಳಿದ ವಾದಿಗಳು ಸಹ ಸಿಂಧುಳ್ಳಿಯಲ್ಲಿ ವಾಸ ಇದ್ದಾರೆ. ವಾದಿಗಳಾದ ನಾವು ಸಿಂಧುವಳ್ಳಿಯಲ್ಲಿ ವಾಸ ಇಲ್ಲದಿದ್ದರೂ ಸಹ ದಾವೆಗೆ ಅನುಕೂಲವಾಗುಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನಿಗೆ ದಾವಾ ಆಸ್ತಿಯನ್ನು ಕಾಳ ಮರಿಯಯ್ಯ ಮತ್ತು ಬಸವಯ್ಯ ಎನ್ನುವವರು ಬರೆದುಕೊಟ್ಟರು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಬಸಯ್ಯ ಯಾವುದೇ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನನಗೆ ಪರಿಚಯ. ಈ ದಿನ ನ್ಯಾಯಾಲಯದಲ್ಲಿರುವ ಪ್ರತಿವಾದಿಯ ಹೆಸರು ನನಗೆ ಗೊತ್ತಿಲ್ಲ. ಬಸವಯ್ಯನ ಮಕ್ಕಳು ನನಗೆ ಗೊತ್ತಿರಬೇಕಿತ್ತು, ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಬಸವಯ್ಯನ ಪಿತ್ರಾರ್ಜಿತ ಆಸ್ತಿ, ಎಂ ಆರ್ 31/87-88ರ ಪ್ರಕಾರ ಪ್ರತಿವಾದಿಗಳು ಆ ಕಾಲದಿಂದಲೂ ದಾವಾ ಆಸ್ತಿಯ ಸ್ವಾಧೀನಕ್ಕೆ ಬಂದು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಗಳು ಮತ್ತು ಅವರ ಮಕ್ಕಳು ಸರ್ವೆ ನಂ. 479/1 ಹಾಗೂ 479/2ರಲ್ಲಿ ಸಂಪೂರ್ಣ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ. 479/1 ರಲ್ಲಿ ನಾವು ಇದ್ದೇವೆ, ಸರ್ವೆ ನಂ. 479/2ರಲ್ಲಿ ಪ್ರತಿವಾದಿಗಳು ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಗಲಾಟೆ ಮಾಡಿದ ಕಾರಣ ನಾವು ಆ ಆಸ್ತಿಗೆ ಹೋಗಿಲ್ಲ. ಸುಮಾರು 50 ವರ್ಷಗಳಿಂದ ಪ್ರತಿವಾದಿಗಳು ಮತ್ತು ಅವರ ಮಕ್ಕಳು ಸ್ವಾಧೀನ ಇದ್ದಾರೆ ನಾವು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಖಾತೆ ಬದಲಾವಣೆ ಮಾಡಿಕೊಡಿ ಎಂದು ನಾವು ಅರ್ಜಿ ಕೊಟ್ಟಿದ್ದೇವೆ ಎಂದರೆ ಸರಿ. ಸದರಿ ಆಸ್ತಿ ಬಸವಯ್ಯನ ಹೆಸರಿನಲ್ಲಿದೆ ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿಲ್ಲ. ನಾನು ಕೊಟ್ಟ ಅರ್ಜಿಯಲ್ಲಿ ಬಸವಯ್ಯನನ್ನು 1ನೇ ಪಕ್ಷಗಾರರನ್ನಾಗಿ ಮಾಡಿ ತಹಸೀಲ್ದಾರರ ಕಛೇರಿಯಲ್ಲಿ ಅವರನ್ನು ಕರೆದಿದ್ದರು ಎಂದರೆ ಸರಿಯಲ್ಲ. ಬಸವಯ್ಯನನ್ನು ತಹಸೀಲ್ದಾರರ ಕಛೇರಿಯಲ್ಲಿ ಕರೆದ ಬಗ್ಗೆ ಗೊತ್ತಿಲ್ಲ. ಖಾತೆ ಬದಲಾವಣೆ ಮಾಡಲು ಅರ್ಜಿಯನ್ನು ತಹಸೀಲ್ದಾರರ ಕಛೇರಿಗೆ ನಾನೇ ಕೊಟ್ಟಿದ್ದೆ. ಬಸವಯ್ಯನ ಹೆಸರು ದಾವಾ ಆಸ್ತಿಯ ಖಾತೆಯಲ್ಲಿ ಇದೆ ಅದನ್ನು ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ.

ತಹಸೀಲ್ದಾರರ ಕಛೇರಿಯಿಂದ ಬಸವಯ್ಯನಿಗೆ ನೋಟೀಸ್ ಬಂದು ಅದಕ್ಕೆ ಬಸವಯ್ಯ ತಕರಾರು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.